INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -01,January-February, 2026
Page No,54-57
Peer -Reviewed, Refereed Journal

# ಸಾಹಿತ್ಯ ಚರಿತ್ರೆ ಮತ್ತು ಮಹಿಳೆ

ಡಾ. ಸುಜಾತಾ ಪಿ. ಘಾತರವೇಕರ.[1]

"Until the lions produce their own historians the story of the hunt glorifies the hunters" ಈ ಮಾತುಗಳನ್ನು ಮೆಲುಕು ಹಾಕುತ್ತ ನನ್ನ ವಿಷಯವನ್ನು ಪ್ರಾರಂಭಿಸುತ್ತೇನೆ. ವಸಾಹತೋತ್ತರ ಚಿಂತನೆಯ ಫಲವಾಗಿ ದಮನಿತರ ಚರಿತ್ರೆಯ ಶೋಧ ಪ್ರಾರಂಭವಾದದ್ದು, ಇದು ಇತ್ತೀಚಿನ ಬೆಳವಣಿಗೆ. ಚರಿತ್ರೆ ಕೇವಲ ಶೋಷಿತರ ಬಗ್ಗೆ ಉಲ್ಲೇಖಿಸುತ್ತದೆ. ಚರಿತ್ರೆ ಯಾರ ಪಾತ್ರ ಅದೃಶ್ಯ ಹಾಗೂ ಕೇಂದ್ರದಲ್ಲಿರುವವರನ್ನು ಮಾತ್ರ ದಾಖಲಿಸುತ್ತದೆ. ಹೀಗಾಗಿ ನಮ್ಮ ಚರಿತ್ರೆಯನ್ನು ನಾವೇ ನಿರ್ಮಿಸಿಕೊಳ್ಳಬೇಕು ಎನ್ನುವ ಎಚ್ಚರ ಮೂಡಿತು. ದಲಿತರು ಶೋಷಿತರು ಈ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಚರಿತ್ರೆಯ ನಿರ್ಮಾಣ ಕೇವಲ ಪ್ರಭಲರ ದೃಷ್ಟಿಯಿಂದಾದದ್ದನ್ನು ಪ್ರಶ್ನಿಸುತ್ತ ದುರ್ಬಲರ ಸಾಮಾನ್ಯರ ದಮನಿತರ ದೃಷ್ಟಿಕೋನದಿಂದ ಚರಿತ್ರೆಯ ಘಟನೆಗಳನ್ನು ವಿಶ್ಲೇಷಿಸುವ ಕ್ರಮ ಆರಂಭವಾಯಿತು. ಈ ಶ್ರಮದ ಫಲವಾಗಿ ಹುಟ್ಟಿಕೊಂಡಿದ್ದು ಸ್ತ್ರೀವಾದ. ಶತ ಶತ ಮಾನಗಳಿಂದ ಮಹಿಳೆ ದಲಿತಳೂ ಹೌದು, ಶೋಷಿತಳೂ ಹೌದು, ಇಡೀ ನಮ್ಮ ಚರಿತ್ರೆಯಲ್ಲಿ ಮಹಿಳೆಯರು ಕಾಣಿಸುವುದೇ ಅಪರೂಪ. ವೇದಕಾಲದ ಗಾರ್ಗಿ, ಮೈತ್ರಿಯಿ ಬಿಟ್ಟರೆ ಅನಂತರ ಕರ್ನಾಟಕದ ಮಟ್ಟಿಗೆ ಶಾಂತಲೆ ಸ್ವಾತಂತ್ರ ಸಮರದ ಕಾಲದ ರಾಣಿಚನ್ನಮ್ಮ ಹೀಗೆ ಅಲ್ಲೊಬ್ಬರು ಇಲ್ಲೊಬ್ಬರು ಎಂಬಂತೆ ಕಾಣಸಿಗುತ್ತಾರೆಯೇ ಹೊರತು ಅಖಂಡವಾದ ಪರಂಪರೆ ಕಾಣಿಸುವುದೇ ಇಲ್ಲ, ಇದು ಕೇವಲ ಚರಿತ್ರೆಯ ಮಾತಲ್ಲ ಸಾಹಿತ್ಯ ಚರಿತ್ರೆ ಕತೆಯೂ ಇದಕ್ಕಿಂತ ಭಿನ್ನವಾದದ್ದೇನಲ್ಲ. ಕನ್ನಡ ಸಾಹಿತ್ಯಕ್ಕೆ ಒಂದು ಸಾವಿರ ವರ್ಷಗಳ ಚರಿತ್ರೆಯಿದ್ದು, ಈ ಕುರಿತು ಅನೇಕ ಸಾಹಿತ್ಯ ಚರಿತ್ರೆಯ ಗ್ರಂಥಗಳು ಇತ್ತೀಚೆಗೆ ರಚನೆಗೊಂಡಿದೆ.

ಈ ಎಲ್ಲ ಕೃತಿಗಳನ್ನು ಗಮನಿಸಿದರೆ ಅಲ್ಲ ಮಹಿಳೆಯ ಗೈರು ಹಾಜರಿಯನ್ನೆ ನಾವು ಕಾಣುತ್ತೇವೆ. ಸಾವಿರ ವರ್ಷಗಳ ಅಖಂಡ ಪರಂಪರೆಯಲ್ಲಿ 12ನೇ ಶತಮಾನದ ಶರಣೆಯರ ಉಲ್ಲೇಖ ಬಿಟ್ಟರೆ

1. ಸಹ ಪ್ರಾಧ್ಯಾಪಕರು, ಎಮ್.ಎಮ್. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, ಶಿರಸಿ.

ಅನಂತರ ಕಾಣಿಸುವುದು 17ನೇ ಶತಮಾನದ ಸಂಚಿ ಹೊನ್ನಮ್ಮ ಶೃಂಗಾರಮ್ಮ, ಗಲಗಲಿ ಅವ್ವನವರು ಇವರನ್ನು ಹೊರತುಪಡಿಸಿದರೆ ಒಮ್ಮೆಲೆ 20ನೇ ಶತಮಾನದಲ್ಲಿಯೇ ಮಹಿಳಾ ಧ್ವನಿ ಕೇಳಿಸುತ್ತದೆ.

ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿಯೂ ಮಹಿಳೆಯರ ಗೈರು ಹಾಜರಿಯಿದೆ. ಹಾಗಾದರೆ ಅಲ್ಲಿ ಮಹಿಳೆಯ ಸಾಹಿತ್ಯ ರಚನೆಯ ಪಕ್ರಿಯೆಯಲ್ಲಿ ಭಾಗವಹಿಸಲೇ ಇಲ್ಲವೇ, ಮಹಿಳೆಯಲ್ಲಿ ಸೃಜನಶೀಲ ಶಕ್ತಿ ಇಲ್ಲವೆ ಎಂಬ ಸವಾಲುಗಳು ಎದುರಾಗುತ್ತವೆ. ಇದನ್ನು ಪರಿಶೀಲಿಸಿದ ಹಾಗೆ ಮಹಿಳೆಯೂ ಮೂಲತಃ ಸೃಜನಶೀಲಳಾಗಿದ್ದರೂ ಅವಳ ಸೃಜನಶೀಲತೆ ಪರಿಗಣನೆಗೆ ಒಲಗಾಗದೆ ಹೋಗಿದೆ. ಹೀಗಾಗುವುದಕ್ಕೆ ಕಾರಣಗಳೇನು? ಎಂದು ಹುಡುಕಾಟಕ್ಕಾಗಿ ತೊಡಗಿದಾಗ ಚರಿತ್ರೆಯ ಬರಹದ ರಾಜಕಾರಣ ಬಯಲಿಗೆ ಬರುತ್ತದೆ. ಸಾಹಿತ್ಯದ ಗುಣ ಲಕ್ಷಣ ಸ್ವರೂಪಗಳಿಂದ ಭಿನ್ನವಾದದ್ದನ್ನು ಚರಿತ್ರೆ ನಿರಾಕರಿಸುತ್ತದೆ. ಲಕ್ಷಣಗಳು ರಸದ್ವನಿ ಅಲಂಕಾರ ಔಚಿತ್ಯ ಮುಂತಾದ ಲಕ್ಷಣಗಳನ್ನು ಗಮನಿಸದೇ ರಚಿಸಿದ ಕೃತಿಗಳನ್ನು ಚರಿತ್ರೆ ಸ್ವೀಕರಿಸುವುದಿಲ್ಲ. ಅವು ಕಳಪೆ ಎನ್ನುವ ತಿರಸ್ಕಾರಕ್ಕೆ ಒಳಗಾಗುತ್ತದೆ. ಶ್ರೇಷ್ಟ ಕನಿಷ್ಠವೆಂಬ ಶ್ರೇಣಿಕರಣದಿಂದಾಗಿ ಸ್ವೀಕರಣ ನಿರಾಕರಣದ ರಾಜಕಾರಣದಲ್ಲಿ ಇಂತವು ನಿರ್ಲಕ್ಷಕ್ಕೆ ಒಳಗಾಗುತ್ತದೆ. ಇದರಿಂದಾಗಿಯೇ ಸ್ತ್ರೀಯರ ಸೃಜನಶೀಲತೆ ದಾಖಲಾಗದೇ ಹೋಯಿತು ಎಂಬ ಸತ್ಯ ಬೆಳಕಿಗೆ ಬರುತ್ತವೆ. ಸ್ತ್ರೀಯರ ಬರಹಗಳು ಸಾಧಾರಣವಾಗಿದ್ದು ಅವು ದಾಖಲೆಗೆ ಯೋಗ್ಯವೇ ಅಲ್ಲ ಎಂಬ ಮನೋಭಾವ ನೆಲೆಗೊಂಡಿದೆ ಹಾಗಾದರೆ ಈ ಸಾಹಿತ್ಯವು ಶ್ರೇಷ್ಠ ಕನಿಷ್ಟವೆಂದು ನಿರೂಪಿಸುವ ತಾರತಮ್ಯದ ಮಾನದಂಡಗಳನ್ನು ರೂಪಿಸಿದವರು ಯಾರು ಎಂಬ ಪ್ರಶ್ನೆ ಎದುರಾದಾಗ ಮತ್ತೆ ಸ್ಥಾಪಿತ ವ್ಯವಸ್ಥೆಯತ್ತ ಬೊಟ್ಟು ಮಾಡಬೇಕಾಗುತ್ತದೆ. ಸಾಹಿತ್ಯ ತತ್ವಗಳು ಕೇವಲ ಮಾನವ ಜನಾಂಗದ ಒಂದು ಸಮುದಾಯದಿಂದ ರೂಪುಗೊಂಡಿವೆ. ಪ್ರಭಲರು ಅಧಿಕಾರಿಗಳೂ ಆದವರು ತಮ್ಮ ದೃಷ್ಟಿಕೋನದಿಂದ ಇವುಗಳನ್ನು ರೂಪಿಸಿದರು ಆದ್ದರಿಂದ ಸಂಪೂರ್ಣ ನಿರ್ಲಕ್ಷಕ್ಕೆ ಒಳಗಾಗಿರುವುದು ಈ ಕಾರಣಗಳಿಂದಾಗಿಯೇ ಸ್ತ್ರೀಯರ ಬರೆಹಗಳಿಗೆ ಮಾನ್ಯತೆ ದೊರೆಯದೆ ಹೋದದ್ದು, ಸ್ತ್ರೀಯರ ಬರಹಗಳು ದಾಖಲೆಗೆ ಯೋಗ್ಯವೇ ಅಲ್ಲ ಕಳಪೆ ಎನ್ನುವಂತಹ ಪೂರ್ವಾಗ್ರಹ ಪೀಡಿತ ಮನೋಭಾವದಿಂದಲೇ ಅನೇಕ ಕೃತಿಗಳು ಹಾಗೂ ಕರ್ತೃಗಳು ಕಾಲಗರ್ಭದಲ್ಲಿ ಹೂತುಹೋಗಿವೆ. ಇಲ್ಲವೇ ಅಜ್ಞಾತ ಕರ್ತೃಕಗಳಾಗಿ ಉಳಿದು ಬಂದಿವೆ.

ಸಾಹಿತ್ಯ ಮತ್ತು ಮಹಿಳೆ ಈ ಸಂಬಂಧಗಳನ್ನು ಎರಡು ನೆಲೆಗಳಲ್ಲಿ ಗುರುತಿಸುವ ಪ್ರಯತ್ನ ಇದೀಗ ಆರಂಭವಾಗಿದೆ. ಇದುವರೆಗೆ ರಚನೆಯಾಗಿರುವ ಸಾಹತ್ಯದಲ್ಲಿ ಮಹಿಳೆಯ ಚಿತ್ರಣ ಹೇಗಿದೆ ಎಂಬುದನ್ನು ನಿರ್ವಹಿಸುವ ಕೆಲಸ. ಅಂದರೆ ಇಂದಿನವರೆಗಿನ ಸಾಹಿತ್ಯದಲ್ಲಿ ಸ್ತ್ರೀ ಪ್ರತಿನಿಧೀಕರಣ ಹೀಗಿದೆ. ಅದರ ಸ್ವರೂಪವೇನು ಸ್ತ್ರೀಯ ದೃಷ್ಟಿಕೋನದಿಂದ ಪಾತ್ರ ಚಿತ್ರಣ ಆಗಿದೆಯೇ ಎನ್ನುವಂತಹ ಪರಿಶೀಲನೆ

ನಡೆದಿವೆ. ಈ ಹಿನ್ನಲೆಯಲ್ಲಿ ನಾವು ರವೀಂದ್ರರ, 'ಕಾವ್ಯ ಉಪೇಕ್ಷಿತ ಮಹಿಳಾ' ದಂತಹ ಕೃತಿಗಳನ್ನು ನಿರ್ಮಾಣವಾದದ್ದನ್ನು ನೊಡಬಹುದು. ಮಹಿಳೆಯ ಪಾತ್ರಗಳನ್ನು ಕೇವಲ ಕೆಲವೇ ಸಿದ್ಧ ಮಾದರಿಗಳಲ್ಲಿ ಅದೆ ಪಡಿಯಚ್ಚುಗಳಲ್ಲಿ ಎರಕಹೋಯ್ಯುವುದನ್ನು ಗುರುತಿಸುವುದು ಇಂದಿನ ವಿಮರ್ಶಾ ಕ್ರಮ ಈ ಇಡೀ ಸಾಹಿತ್ಯದಲ್ಲಿ ಸ್ತ್ರೀಯ ಪಾತ್ರಗಳು ತುಂಬ ಸೀಮಿತ ನೆಲೆಯಲ್ಲಿ ವಿಚಿತ್ರ ವಾಗಿರುವುದನ್ನು ಕಾಣುತ್ತೇವೆ.

ಆದರ್ಶನಾರಿಯರು, ತಾಯಿ, ಹೆಂಡತಿ, ಸೋದರಿ, ಮಗಳು, ಸೊಸೆ ಇಂತಹ ಸ್ವೀಕೃತ ಯೋಗ್ಯ ಮಾದರಿಗಳೆ ವೈಶ್ಯಾಂಗನೆ, ರಾಕ್ಷಸಿ, ಜಗಳಗಂಟಿ ಮಾದರಿಯ ಪಾತ್ರಗಳು ಇದು ನಿರಾತ್ಮಕ ಮಾದರಿ. ಈ ಎರಡರಲ್ಲಿ ಒಂದು ಸ್ವೀಕೃತ ಮಾದರಿ ಇನ್ನೊಂದು ನಿರಾತ್ಮಕ ಮಾದರಿ. ಇದರ ಹೊರತಾಗಿ ಸ್ತ್ರೀಯ ಪ್ರತ್ಯೇಕ ಅಸ್ತಿತ್ವವನ್ನು ಗುರುತಿಸುವ ಅವಳ ಅನನ್ಯತೆಯನ್ನು ಅಸ್ಮಿತೆಯನ್ನು ಗುರುತಿಸುವ ರೀತಿಯ ಚಿತ್ರಣ ತುಂಬ ಕ್ವಚಿತ ಇಂತಹ ಸಿದ್ಧ ಪಾತ್ರಗಳಲ್ಲಿಯೇ ಕಂಡು ಬರುವ ವ್ಯಕ್ತಿಯ ಒಳತೋಟಗಳು ಮನಸ್ಸಿನ ಸಂಘರ್ಷಗಳು ಇವುಗಳನ್ನು ನಿರ್ಲಕ್ಷೀಡಾಗಿರುವ ಬಗೆಯನ್ನು ಗುರುತಿಸುವುದು ಉದಾ: ಮಹಾಭಾರತದ ಅಂಬೆಯ ಪಾತ್ರ ಭೀಷ್ಮನ ಪಾತ್ರದ ವೈಭವೀಕರಣವಿದೆ. ಭೀಷ್ಮ ಪ್ರತಿಜ್ಞೆಯಿಂದ ಅಂಬೆಗಾದ ಅನ್ಯಾಯದ ಬಗೆಗೆ ಕವಿ ಮೌನ ವಹಿಸುತ್ತಾನೆ. ಭೀಷ್ಮನ ತಿರಸ್ಕಾರದಿಂದ ಅಂಬೆಗೆ ಆದ ನೋವು, ಅವಳ ನಿರಾಶೆ, ಆದ ಆಘಾತ ಎಂಬುದರ ಕಡೆಗೆ ಕವಿಯ ಗಮನವೇಕೆ ಹೋಗುವುದಿಲ್ಲ ಎನ್ನುವುದು ಪ್ರಶ್ನಾರ್ಹವಾಗುತ್ತದೆ. ಕವಿಗೆ ಭೀಷ್ಮನ ಪ್ರತಿಜ್ಞೆಯ ಉಳಿಸಿಕೊಳ್ಳುವಿಕೆಗಾಗಿ ಬದ್ಧನಾಗುವುದ ಮೌಲ್ಯವಾಗುತ್ತದೆಯೇ ಹೊರತು ಅಂಬೆಗಾದ ಅನ್ಯಾಯ ಮತ್ತು ಮೋಸಗಳು ಗೌಣವಾಗಿ ಬಿಡುತ್ತದೆ. ಅವು ಬೆಳಕಿಗೆ ಬಾರದೇ ಹೋಗುತ್ತದೆ. ಅಂಬೆ ಮರೆಗೆ ಸರಿಯುತ್ತಾಳೆ, ಇಲ್ಲವೇ ಶಿಖಂಡಿಯಾಗಿ ಸೇಡು ತೀರಿಸಿ ಕೊಳ್ಳುವಷ್ಟು ಪರಿವರ್ತಿತಳಾದಂತೆ ಚಿತ್ರಿತಳಾಗುತ್ತಾಳೆ. ಇದು ಕೇವಲ ಒಂದು ಉದಾಹರಣೆ ಈ ಹೆಣ್ಣು ಎಂದರೆ ಸೇಡಿನ ಪ್ರತೀಕ ಎಂಬಂತಹ ಗೌಣನೆಲೆಗೆ ತಳ್ಳಲ್ಪಡುತ್ತಾಳೆ. ಇದು ನಮ್ಮ ಪರಂಪರಾಗತ ಸಾಹಿತ್ಯದಲ್ಲಿ ಕಂಡು ಬರುವ ಸ್ತ್ರೀಯ ಪ್ರತೀಕ. ಇಲ್ಲವೆ ಸೀತೆ ಸಾವಿತ್ರಿಯಂತ ವೈಭವೀಕರಣದಲ್ಲಿ ಸ್ತ್ರೀತ್ವ ಕಳೆದು ಹೋಗಿ ಬಿಡುತ್ತದೆ. ಚರಿತ್ರೆಯಲ್ಲಿ ಮಹಿಳೆಯ ಸೃಜನಶೀಲತೆಯನ್ನು ದಾಖಲಿಸುವದು– ಇನ್ನೊಂದು ವಿಧಾನ. ಮಹಿಳೆಯರ ಗೈರು ಹಾಜರಿ ಎಂದರೆ ಅವಳ ಸೃಜನಶೀಲತೆಯ ಗೈರು ಹಾಜರಿ ಎಂದು ಅರ್ಥವಲ್ಲ. ಆ ಕಾರಣ ಕಾಲಗರ್ಭದಲ್ಲಿ ಹೂತುಹೋಗಿ ಮರೆಗೆ ಸರಿದಿರುವ ಸೃಜನಶೀಲ ಮಹಿಳೆಯರ ಶೋಧ. ಅವರ ಸಾಹಿತ್ಯದ ಶೋಧ ಮತ್ತು ಅದರ ದಾಖಲೀಕರಣ ಇದು ಇಂದಿನ ಅಗತ್ಯಗಳಲ್ಲೊಂದು ಈ ಪ್ರಯತ್ನದ ಫಲವಾಗಿ ಅನೇಕ ಮಹಿಳೆಯರು ಮತ್ತು ಅವರ ಕೃತಿಗಳು ಬೆಳಕು ಕಂಡಿವೆ.

ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಮಹಿಳೆಯರಿಗಾಗಿ ಅವರ ಕೃತಿಗಳಾಗಿ ಶೋಧ ನಡೆದು ಬೆಳಕು ಕಂಡಿದೆ. ಉದಾ:– ನಂಜನಗೂಡು ತಿರುಮಲಾಂಬಾ, ಆರ್ ಕಲ್ಯಾಣಮ್ಮ, ಬೆಳಗೆರೆ ಜಾನಕಮ್ಮ, ದ. ಕನ್ನಡದ ಮೂಕಜ್ಜಿ, ಶಾಮಲಾದೇವಿ, ಬೆಳಗಾಂವಕರ, ಸರಸ್ವತಿ ಗೌಡರ, ಸರಸ್ವತಿ ಬಾಯಿ ರಾಜವಾಡೆ, ಕೊಡಗಿನ ಗೌರಮ್ಮ, ಮುಂತಾದ ಹಲವಾರು ಪ್ರತಿಬೆಗಳು ಅವರ ಕೃತಿಗಳು ಬೆಳಕು ಕಂಡಿದೆ ಕಾಣುತ್ತಿವೆ.

ಇಂತಹ ಇನ್ನೂ ಅದೆಷ್ಟೊ ಪ್ರತಿಭೆಗಳು ನೆಲದ ಮರೆಯಲಿ ನಿಧಾನವಾಗಿರುವ ಸಾಧ್ಯತೆಯಿದೆ. ಉಪೇಕ್ಷೆಗೆ ಒಳಗಾಗಿರುವ ಈ ಸಾಹಿತ್ಯ ನಮ್ಮ ನಿಮ್ಮ ಮನೆಗಳಲ್ಲಿ, ಮಾಡಿನ ಮೂಲೆಯಲ್ಲಿ ಬಿದ್ದು ಕೊಳೆಯುತ್ತ ಮುಕ್ತಿದಾತರಿಗಾಗಿ ಕಾಯುತ್ತಿರಬಹುದು. ಇಂತಹ ಕೃತಿಗಳನ್ನು ಕರ್ತೃಗಳನ್ನು ಗುರುತಿಸಿ ಸಾಹಿತ್ಯ ಚರಿತ್ರೆಯೊಂದನ್ನು ಕಟ್ಟಿಕೊಳ್ಳುವ ಪ್ರಯತ್ನ ಆರಂಭವಾಗಿದೆ. ಈ ಪ್ರಕ್ರಿಯೆಯಿಂದಾಗಿಯೇ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ 'ಮಹಿಳಾ ಸಾಹಿತ್ಯ ಚರಿತ್ರೆ ಎಂಬ ಕೃತಿ ಇತ್ತೀಚೆಗೆ ಪ್ರಕಟವಾಗಿದೆ. ಅಲ್ಲದೆ ಅಲ್ಲಲ್ಲಿ ಕೆಲವು ಬಿಡಿ ಬಿಡಿ ಪ್ರಯತ್ನಗಳೂ ನಡೆಯುತ್ತಿವೆ.

## ಪರಾಮರ್ಶನ ಗ್ರಂಥಗಳು

1. ಮಹಿಳಾ ಸಾಹಿತ್ಯ– ಹುಟ್ಟು ಮತ್ತು ಬೆಳವಣಿಗೆ– ಸುಧಾ ಎ. ಆರ್
2. ಸ್ತ್ರಿವಾದ ಒಂದು ಅವಲೋಕನ– ಬಿ.ಎನ್. ಸುವಿತ್ರ ಬಾಯಿ,
3. ಆಧುನಿಕ ಮಹಿಳಾ ಸಾಹಿತ್ಯ ಇನ್ನಷ್ಟು ಪುಟಗಳು. ಸಂ.ಡಾ. ಎಂ. ಉಷಾ,
4. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ– ಸಂ. ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ
5. ವೈದೇಹಿ ಗೌರವ ಗ್ರಂಥ– ಸಂ. ಸವಿತಾ ನಾಗಭೂಷಣ, ತಾರಿಣಿ ಶುಭದಾಯಿನಿ